ನೀಲಕಂಠ ಪರ್ವತದ ಮಗ್ಗುಲಲ್ಲೇ ನಡೆಯುವ ದಾರಿಯಾದರೂ, ನಾವು ಗ್ಲೇಸಿಯರ್ ಏರಿಗಳನ್ನು ಹತ್ತಿ ಮುಂದುವರೆದೆವು. ನಮ್ಮ ಎಡಭಾಗದಲ್ಲಿ ಒಂದು ದೊಡ್ಡ ಜಲಪಾತ ಕಂಡುಬಂತು. ನಂತರ ಇನ್ನೂ ಹೆಚ್ಚಿನ ಸಣ್ಣಸಣ್ಣ ಜಲಪಾತಗಳಿದ್ದವು. ಒಟ್ಟಾರೆ ಈ ಜಲಪಾತಗಳನ್ನು ಸಹಸ್ರಧಾರ ಎಂದು ಕರೆಯುತ್ತಾರೆ. ಏಪ್ರಿಲ್–ಮೇ ತಿಂಗಳಲ್ಲಿ ಹಿಮ ಕರಗಿ, ನೂರಾರು ಜಲಪಾತಗಳು ಕಂಡುಬರುತ್ತವೆ, ಹಾಗಾಗಿ ಇವುಗಳಿಗೆ 'ಸಹಸ್ರಧಾರ' ಎಂಬ ಹೆಸರು.

ಗ್ಲೇಸಿಯರ್ ಏರಿ ಹತ್ತಿ ನಡೆಯುತ್ತಿದ್ದ ನಮಗೆ, ದಾರಿ ಸವೆಯುತ್ತಿರುವಂತೆ ಅನಿಸಲಿಲ್ಲ. ಅಗಾಧ ನೀಲಕಂಠ ಪರ್ವತ ಒಂದು ಕಡೆ, ಗ್ಲೇಸಿಯರ್‌ನ ಅತಿ ಉದ್ದವಾದ ಏರಿ ಒಂದು ಕಡೆ. ಹೀಗೆ ಸುಮಾರು 4–5 ಗಂಟೆಗಳ ಕಾಲ ನಡೆದಿರಬಹುದು. ಪರಿಹರಿಸಿಕೊಳ್ಳುವುದೇ ಮುಖ್ಯ ಎನಿಸಿಬಿಡುತ್ತದೆ. ಎಷ್ಟೇ ದಣಿವಾಗಿದ್ದರೂ, ಹಿಮನದಿಯಲ್ಲಿನ ಮಂಜುಬಂಡೆಗಳು ಒಡೆದುಕೊಳ್ಳುವ ಜೋರಾದ ಶಬ್ದ, ನೀರು ರಭಸವಾಗಿ ಭೋರ್ಗರೆವ ಶಬ್ದ, ಗಾಳಿ ಸುಯಿಲು – ಇವುಗಳ ನಡುವೆ ರಾತ್ರಿ ಭಯದ ಜೊತೆಗೆ ನಿದ್ದೆ ಬರುವುದೂ ಕಡಿಮೆ. ಮೈಗೆ ಎಷ್ಟೇ ಬೆಚ್ಚನೆ ಬಟ್ಟೆಗಳು ಹಾಕಿಕೊಂಡಿದ್ದರೂ, ಸುಳಿದು ಕೊರೆಯುವ ಚಳಿ ಹತಾಶೆ ಮೂಡಿಸುತ್ತದೆ. ಈ ಹತಾಶೆಯಿಂದ ಹೊರಬರಲು ಜೊತೆಗಾರರ ಸಖ್ಯ ತುಂಬಾ ಮುಖ್ಯ. ನಮ್ಮ ತಂಡದಲ್ಲಿ ಒಬ್ಬರನ್ನೊಬ್ಬರು ಹುರಿದುಂಬಿಸಿ, ತಮಾಷೆ ಮಾಡಿಕೊಂಡು ಮುಂದೆ ಸಾಗುತ್ತಿದ್ದೆವು.

ಚಕ್ರತೀರ್ಥದಿಂದ ಸುಮಾರು 2 ಕಿ.ಮೀ. ದೂರದಲ್ಲಿ ಒಂದು ಏರಿ ಕಾಣುತ್ತಿತ್ತು. ಏರಿ ದಾಟಿ



ಹೊನ್ನ ಕಿರಣಗಳಿಂದ ಬಂಗಾರದ ಕಳಸದಂತಾದ ನೀಲಕಂಠ ಪರ್ವತ ಶಿಖರ

ನೀಲಾಕಾಶದ ವಾತಾವರಣದಲ್ಲಿ ಇದ್ದಕ್ಕಿದ್ದ ಹಾಗೆ ದೊಡ್ಡ ಗುಡುಗಿನ ಶಬ್ದ ಕೇಳಿಬಂತು. ನಿಜಕ್ಕೂ ಭಯ ಹುಟ್ಟಿಸುವಂಥ ಶಬ್ದ. ಶಿಖರಗಳ ನಡುವೆ ಆ ಸದ್ದು ಪ್ರತಿಧ್ವನಿಸುತ್ತಲೇ ಇತ್ತು. ಆಮೇಲೆ ತಿಳಿಯಿತು, ಅದು ನೀಲಕಂಠಪರ್ವತದಲ್ಲಿ ಆದ ಭಾರೀ ಹಿಮಪಾತವೆಂದು. ಹಿಮದ ಹುಡಿಗಳು ಗಾಳಿಗೆ ತೂರಿಬಂದು ನಮ್ಮ ಮೈಮೇಲೆ ಹಿಟ್ಟಿನ ರೂಪದಲ್ಲಿ ಬಿದ್ದವು. ಸಂಜೆ ಸುಮಾರು 4 ಗಂಟೆ ಹೊತ್ತಿಗೆ ನಾವು ಚಕ್ರತೀರ್ಥ ಎನ್ನುವ ಬಯಲು ಸೇರಿದೆವು. ವಿಶ್ರಮಿಸಿಕೊಳ್ಳಲು ಡೇರೆಗಳು ಸಿದ್ಧವಾಗಿದ್ದವು. ನಾವು ಸುಮಾರು 13 ಸಾವಿರಕ್ಕೂ ಹೆಚ್ಚು ಅಡಿ ಎತ್ತರದಲ್ಲಿದ್ದೇವೆಂದು ಗೈಡ್ ತಿಳಿಸಿದ. ಚಕ್ರತೀರ್ಥ ಜಾಗದಿಂದ ನಮಗೆ ಚೌಕಂ, ಸತೋಪಂತ್, ಸ್ವರ್ಗಾರೋಹಿಣಿ ಶಿಖರಗಳು ಕಾಣಿಸಿದವು.

ಸೂರ್ಯ ಮೇಲೇರಿದಂತೆ, ಚಾರಣದ ದಾರಿಯಲ್ಲಿ ಆಗುವ ಹಸಿವು, ಬಾಯಾರಿಕೆ, ಆಯಾಸಗಳಿಗೆ ಯಾವುದೂ ಆಕರ್ಷಣೀಯವಾಗಿರದೆ, ದಣಿವು

ಆ ಕಡೆಗೆ ಸ್ವಲ್ಪ ನಡೆದರೆ ಸಾಕು ಸತೋಪಂತ್ ಸರೋವರ ಸಿಗುತ್ತದೆ, ನಾವು ಬೇಗ ತಲುಪಿ, ಬೇಗನೇ ವಾಪಸ್ ಬರಬಹುದೆಂದು ಗೈಡ್ ತಿಳಿಸಿದ. ಈಗಾಗಲೇ ಎರಡು ದಿನ ಏರಿಗಳನ್ನು ಹತ್ತಿ ಬಂದಿದ್ದೇವೆ, ಇದ್ಯಾವ ಮಹಾ ಎಂದು ಅಂದುಕೊಂಡೆವು. ಮರುದಿನ ಬೆಳಿಗ್ಗೆ ಆ ಏರಿಯ ಬುಡ ತಲುಪಿದಾಗ ಅದರ ನಿಜ ದರ್ಶನವಾಯಿತು.

ಹೆಚ್ಚುಕಡಿಮೆ 45 ಡಿಗ್ರಿ ಕೋನದಲ್ಲಿ ಹತ್ತಬೇಕು. ಉರುಳಿದರೆ, ಕೈಕಾಲು ಮುರಿಯುವುದು ಖಂಡಿತ! ಸುಮಾರು ಅರ್ಧ ಕಿ.ಮೀ. ಎತ್ತರದ ಏರಿ, ದೂರದ ಬೆಟ್ಟ ನುಣ್ಣಗೆ ಎನ್ನುವ ಗಾದೆ ಮಾತಿನ ನಿಜವಾದ ಅರ್ಥ ನಮಗೆ ಆಯಿತು. ಆ ಏರಿ ಹತ್ತಲು ಎರಡು ಗಂಟೆಗಳಿಗೂ ಹೆಚ್ಚು ಕಾಲ ತೆಗೆದುಕೊಂಡೆವು. ಏರಿ ಹತ್ತುವಷ್ಟರಲ್ಲಿಯೇ ನಮ್ಮ ಕುಡಿಯುವ ನೀರಿನ ಚೀಲಗಳು ಬರಿದಾಗಿದ್ದವು. ಏರಿಯ ತುದಿಯಲ್ಲಿ ಹೆಚ್ಚು ಹೊತ್ತು ನಿಲ್ಲಲೂ ಸಾಧ್ಯವಿಲ್ಲ. ಅತಿ ಕಡಿಮೆ ಜಾಗದ ಚೂಪಾದ ಏರಿ ಅದು. ಗಾಳಿ ಜೋರಾಗಿ ಬೀಸುತ್ತಿತ್ತು. ಏರಿ ಮೇಲಿನಿಂದ ಸುತ್ತಲೂ ಕಣ್ಣು ಹಾಯಿಸಿದರೆ, ಹಿಮಾಲಯ ಶಿಖರಗಳ ಭವ್ಯ ದರ್ಶನ! ಆ ರಮ್ಯನೋಟಕ್ಕೆ ಎದೆ ಝಲ್ ಎಂದಿತ್ತು.

ಏರಿಯಿಂದ ಇಳಿದ ನಾವು, ಈಗ ಗ್ಲೇಸಿಯರ್ ಮೇಲೇ ನಡೆಯತೊಡಗಿದೆವು. ಎಲ್ಲೂ ನಿಲ್ಲದೆ, ಜಾಗರೂಕರಾಗಿ ಇನ್ನೊಂದು ಏರಿಯನ್ನು ಆದಷ್ಟು ಬೇಗ ಹತ್ತಲೇಬೇಕೆಂದು ಗೈಡ್ ಹೇಳಿದ್ದ. ಗ್ಲೇಸಿಯರ್ ಪದರಗಳ ಕೆಳಗೆ ಹಿಮ ಕರಗಿದ ನೀರು ರಭಸವಾಗಿ ಹರಿಯುತ್ತಿದ್ದು, ಎಲ್ಲಿ ಬೇಕಾದರೂ ಹಿಮಪದರ ಒಡೆದು, ನಾವು ಅಡಿಯಿಡುವ ಜಾಗ ಬಿರಿಯಬಹುದು ಎಂದು ತಿಳಿಸಿದ. ಹಿಮಪದರಗಳ ಮೇಲೆ, ದೂಳು, ಮಣ್ಣು ಕಲ್ಲುಗಳು ಬಿದ್ದು ಸಾಮಾನ್ಯ ನೆಲದಂತೆ ಕಂಡರೂ, ನಮ್ಮ ಕಾಲುಗಳ ಕೆಳಗಿನ ನೆಲದ, ಹಿಮಪದರಗಳ ಕೆಳಗೆ ನೀರು ಹರಿಯುತ್ತಿರುವುದು ನಮಗೆ ಅನುಭವಕ್ಕೆ ಬಂದಿತು. ನೋಡನೋಡುತ್ತಿದ್ದಂತೆಯೆ, ಎಲ್ಲಿಂದಲೋ ಆಟೊ ಗಾತ್ರದ ಕಲ್ಲೊಂದು ನಮ್ಮ ಕಡೆಗೆ ಹಠಾತ್ತನೆ ಉರುಳಿಬಂತು. ಕೆಲವೇ ಅಡಿಗಳ ದೂರದಲ್ಲಿ ಹಾದುಹೋಯಿತು! 'ಇವೆಲ್ಲ ಇಲ್ಲಿ ಸಾಮಾನ್ಯ. ನಿಲ್ಲದೇ ಮುಂದುವರೆಯಿರಿ' ಎಂದು ಗೈಡ್ ತಕ್ಷಣವೇ ಎಲ್ಲರನ್ನು ಹೊರಡಿಸಿದ.

ಬೇಗನೆ ಏರನ್ನು ಏರಿದೆವು. ಏರಿನ ತುದಿಯಿಂದ ಸತೋಪಂತ್ ಸರೋವರದ ದರ್ಶನವಾಯಿತು. ಮೂರು ದಿನಗಳ ಸತತ ಚಾರಣದ ಗುರಿ ನಮ್ಮ ಮುಂದೆಯೇ ಇದ್ದದ್ದನ್ನು ಕಂಡು ತಂಡದ ಎಲ್ಲರ ಮುಖದಲ್ಲೂ ಸಂತೋಷ. ಒಬ್ಬರನ್ನೊಬ್ಬರು ಅಪ್ಪಿಕೊಂಡು ಅಭಿನಂದಿಸಿಕೊಂಡೆವು. ನಾವು 15 ಸಾವಿರ ಅಡಿಗಳಿಗೂ ಹೆಚ್ಚಿನ ಎತ್ತರದಲ್ಲಿದ್ದೇವೆಂದು ಗೈಡ್ ತಿಳಿಸಿದ.

ತ್ರಿಭುಜಾಕಾರದಲ್ಲಿ ಕಾಣುವ ಸರೋವರ, 3–4 ಸಾಧಾರಣ ಸ್ಟೇಡಿಯಂಗಳಷ್ಟು ವಿಸ್ತೀರ್ಣವಿತ್ತು. ಸರೋವರದ ತಟ ತಲುಪಿದೆವು. ದೂರದಿಂದ ಹಸುರು ಬಣ್ಣದ ನೀರು ಎನಿಸುವಂತಿದ್ದರೂ, ಹತ್ತಿರದಿಂದ ನೋಡಿದಾಗ ಬಹಳ ತಿಳಿಯಾದ ತಳ ಕಾಣುವ ಶುದ್ಧ ನೀರು! ಬೊಗಸೆಯಲ್ಲಿ ಹಿಡಿದು ಕುಡಿಯಲು ಶುರುಮಾಡಿದೆವು. ಹಿಮದಷ್ಟೇ ಶೀತವಾಗಿದ್ದ ನೀರನ್ನು ಒಂದು ಸೆಕೆಂಡ್ ಬೊಗಸೆಯಲ್ಲಿ ಹಿಡಿಯಲು ಕಷ್ಟವಾಯಿತು.

ಸತೋಪಂತ್ ಸರೋವರದಿಂದ ನೀಲಕಂಠ ಪರ್ವತದ ದರ್ಶನ ರಮ್ಯ ಮನೋಹರ. 'ಬೃಹತ್', 'ಅಗಾಧ' ಪದಗಳು ಆ ಪರ್ವತವನ್ನು ವಿವರಿಸಲು ಬಹಳ ಸಣ್ಣವು. ಸಾಗರಕ್ಕೆ ಸಾಗರವೇ ಸಾಟಿ ಎನ್ನುವ ಹಾಗೆ ಆ ಪರಿಮಾಣವನ್ನು ಅಳೆಯಲು ನಮ್ಮ ಇಂದ್ರಿಯಗಳು ಸೋತವು. ರಮ್ಯ ದೃಶ್ಯದ ಜೊತೆಗೆ ಗಾಳಿಯ ಘೋರ ಸುಯಿಲು, ಹಿಮಬಂಡೆಗಳು ಒಡೆದುಕೊಳ್ಳುವ ಗುಡುಗುಗಳು... ಅಬ್ಬಾ ಆದಷ್ಟು ಬೇಗನೆ ನಮ್ಮನ್ನು ಮನೆ ಸೇರಿಸಪ್ಪಾ ಎಂದು ನೀಲಕಂಠ ಪರ್ವತವನ್ನೇ ಬೇಡಿಕೊಳ್ಳುವಂತಾಯಿತು.

ಒಟ್ಟು ಐದು ದಿನಗಳ ಸತೋಪಂತ್ ಚಾರಣ ಸುರಕ್ಷಿತವಾಗಿ ಆಯಿತು. ಮರಳಿ ಬದರೀನಾಥಕ್ಕೆ ತಲುಪಿದಾಗ ಮನದೊಳಗೆ ಒಂದು ರೀತಿಯ ಸುರಕ್ಷಿತಭಾವ.

ಪ್ರತಿಕ್ರಿಯಿಸಿ: feedback@sudha.co.in